**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.238/2022

ಸಾಕ್ಷಿಯನ್ನು ದಿಃ **11.12.2025** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯರ ಪರಃ ಶ್ರೀ**. RK **ಪರ ಶ್ರೀ**.DG **ವಕೀಲರಿಂದ**:

ನಾನು SSLC ಓದಿದ್ದೇನೆ. ನಾನು ಕಂಪಲಾಪುರದಲ್ಲಿ ವಾಸ ಮಾಡುತ್ತೇನೆ. ನನ್ನ ತಾತನ ಹೆಸರು ದೇವಯ್ಯ. ವಾದಿ, 2 ಮತ್ತು 3ನೇ ಪ್ರತಿವಾದಿಯರು ನನ್ನ ಚಿಕ್ಕಪ್ಪಂದಿರು ಎಂದರೆ ಸರಿ. ದಾವಾ ಸ್ವತ್ತುಗಳು ಚಿಲ್ಕುಂದ ಗ್ರಾಮದಲ್ಲಿ ಇವೆ ಎಂದರೆ ಸರಿ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಒಂದು ಪಿತ್ರಾರ್ಜಿತ ಆಸ್ತಿ. ಇನ್ನೊಂದು ಸ್ವಯಾರ್ಜಿತ ಆಸ್ತಿ. ದಾವಾ ಐಟಂ ನಂ.1 ಮತ್ತು 2 ನನ್ನ ತಾತನಿಗೆ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ.

ದಾವಾ ಐಟಂ ನಂ.1 ಮತ್ತು 4 ಪಿತ್ರಾರ್ಜಿತ ಆಸ್ತಿಯಾಗಿದೆ. ದಾವಾ ಐಟಂ ನಂ.2 ಮತ್ತು 3 ಸ್ವಯಾರ್ಜಿತ ಆಸ್ತಿಗಳಾಗಿವೆ. ದಾವಾ ಐಟಂ ನಂ.2 ಮತ್ತು 3 ಸ್ವಯಾರ್ಜಿತ ಆಸ್ತಿಗಳು ಎಂದು ಪ್ರತಿವಾದ ಪತ್ರ ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ. ಸ್ವಯಾರ್ಜಿತ ಆಸ್ತಿಗಳನ್ನು ಯಾರು ಯಾರಿಂದ ಖರೀದಿಸಿದರು ಎಂದು ನನಗೆ ಗೊತ್ತಿಲ್ಲ. ಸ್ವಯಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಯಾವ ಆಧಾರದ ಮೇಲೆ ಸ್ವಯಾರ್ಜಿತ ಆಸ್ತಿ ಎಂದು ಹೇಳುತ್ತಿದ್ದಿರಿ ಎಂದರ ಹಿಂದಿನಿಂದಲೂ ಸಾಗುವಳಿ ಮಾಡಿಕೊಂಡು ಬರುತ್ತಿರುವ ಆಧಾರದ ಮೇಲೆ ಹೇಳುತ್ತಿದ್ದೇನೆ. ಹಿಂದಿನಿಂದಲೂ ಸಾಗುವಳಿ ಮಾಡಿಕೊಂಡು ಬರುವ ರೀತಿಯಲ್ಲಿಯೇ ಸ್ವಾಧೀನ ಇದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದಾಗಲೇ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪಂದಿರು ವಿಭಾಗ ಆಗಿದ್ದರು ಎಂದರೆ ಸರಿಯಲ್ಲ. ಸರ್ವೇ ನಂಬರ್ 246/1 ಮತ್ತು 246/2ರ ಬಗ್ಗೆ 1980-81ರಿಂದಲೇ ಜಂಟಿ ಖಾತೆ ಇದೆ. 1980ಕ್ಕೂ ಪೂರ್ವದಲ್ಲಿ ದಾವ ಸ್ವತ್ತುಗಳು ಯಾರ ಹೆಸರಿನಲ್ಲಿತ್ತು ಎಂದರೆ ಗೊತ್ತಿಲ್ಲ. ಸರ್ವೇ ನಂಬರ್ 246 ಪೋಡಾಗಿಲ್ಲ. ಸರ್ವೇ ನಂಬರ್ 246/1ರಲ್ಲಿ 1 ಎಕರೆ 28 ಗುಂಟೆ ಎಂದರೆ ಸರಿ. ಸದರಿ 1 ಎಕರೆ 28 ಗುಂಟೆ ಪೈಕಿ 28 ಗುಂಟೆಯು ವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿ 1 ಎಕರೆ 28 ಗುಂಟೆಯಲ್ಲಿ ವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿ ಸ್ವಾಧೀನ ಇರುವ 1 ಎಕರೆ 28 ಗುಂಟೆಯ ಚಕ್ಕುಬಂಧಿ ಪೂರ್ವಕ್ಕೆ ಚನ್ನಿಗರವರ ಜಮೀನು, ಪಶ್ಚಿಮಕ್ಕೆ ಹೆಜ್ಜೂರಯ್ಯರವರ ಜಮೀನು. ಉತ್ತರಕ್ಕೆ 3ನೇ ಪ್ರತಿವಾದಿಯ ಜಮೀನು, ದಕ್ಷಿಣಕ್ಕೆ ಅಪ್ಪಣ್ಣಯ್ಯರವರ ಜಮೀನು ಎಂದರೆ ಸರಿಯಲ್ಲ. ನನ್ನ ತಂದೆಯ ಕಾಲದಿಂದಲೂ ಮೇಲೆ ಹೇಳಿದ ಚಕ್ಕುಬಂದಿಯಲ್ಲಿರುವ ಜಮೀನಿನ ಸ್ವಾಧೀನತೆಯನ್ನು ವಾದಿ ಹೊಂದಿದ್ದಾರೆ ಎಂದರೆ ಸರಿಯಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು**.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)

ಪ್ರಧಾನ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.